**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕೆ.ಆರ್ ನಗರ**

**ಸಿಸಿ ನಂ. 313/2024**

**ಪಿರ್ಯಾದುದಾರರುಃ** ಶ್ರೀ ಎ.ಎಂ.ರಮೇಶ ಬಿನ್ ಎ.ಪಿ.ಮಹದೇವಶೆಟ್ಟಿ

**--ವಿರುದ್ಧ –**

**ಆರೋಪಿಃ** ಶ್ರೀ ಪ್ರೀತಮ್.ಡಿ.ಜೆ ಬಿನ್ ಜಯರಾಮ,
25 ವರ್ಷ, ದೊಡ್ಡಕೊಪ್ಪಲು ಗ್ರಾಮ, ಹೊಸ ಅಗ್ರಹಾರ ಹೋಬಳಿ,
ಕೆ ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ.

**ಆಪಾದನೆ**

ಆರೋಪಿಯಾದ ನೀವು ಪಿರ್ಯಾದುದಾರರಿಗೆ ಕಾನೂನುಬದ್ಧವಾಗಿ ಪಾವತಿ ಮಾಡಬೇಕಾದ ರೂ.1,50,000/- ಮರುಪಾವತಿಗಾಗಿ **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕೆ.ಆರ್.ನಗರ ಶಾಖೆ,** ಇಲ್ಲಿಯ ಚೆಕ್ ನಂಃ 006042 ದಿನಾಂಕಃ 20.08.2024 ರೂ.1,50,000/- ಎಂದು ನಮೂದಿಸಿ ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆಯನ್ನು ಹೊಂದಿರುವ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆ ಆರ್ ನಗರ ಶಾಖೆ,** ಇಲ್ಲಿ ನಗದೀಕರಿಸಲು ಹಾಜರುಪಡಿಸಿದಾಗ, ಸದರಿಯವರು ನಿಮ್ಮ ಖಾತೆಯನ್ನು "Advice not received" ಎಂಬ ಹಿಂಬರಹಗಳೊಂದಿಗೆ ಚೆಕ್ಕು ಅಮಾನ್ಯಗೊಂಡಿದ್ದು, ಆ ಬಗ್ಗೆ ಸದರಿ ಬ್ಯಾಂಕಿನವರು ದಿನಾಂಕ: 22.08.2024 ರಂದು ಹಿಂಬರಹವನ್ನು ನೀಡಿದ್ದು, ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮುಖಾಂತರ 05.09.2024 ಬರವಣಿಗೆ ರೂಪದಲ್ಲಿ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಚೆಕ್ಕಿನಲ್ಲಿರುವ ಹಣವನ್ನು ಮರುಪಾವತಿ ಮಾಡಿರುವುದಿಲ್ಲ, ಆ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿದ್ದೀರೆಂದು ಆಪಾದಿಸಲಾಗಿದೆ.

ಪ್ರಶ್ನೆಃ-1 ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ-2 ಚೆಕ್ಕು ಸಂಖ್ಯೆ006042 ನಿಮ್ಮ ಬ್ಯಾಂಕಿನ ಖಾತೆಯ ಚೆಕ್ಕು ಆಗಿರುತ್ತದೇಯೇ ಅಥವಾ ಇಲ್ಲವೇ ?
ಉತ್ತರಃ

ಪ್ರಶ್ನೆಃ-3 ಚೆಕ್ಕು ಸಂಖ್ಯೆ006042 ರಲ್ಲಿ ಇರುವ ಸಹಿಯನ್ನು ಒಪ್ಪಿಕೊಳ್ಳುವಿರಾ ಅಥವಾ ಇಲ್ಲವೇ ?

ಉತ್ತರಃ

ಪ್ರಶ್ನೆ-4 ಚೆಕ್ಕು ಸಂಖ್ಯೆ006042 ನೀವು ಪಿರ್ಯಾದಾರರಿಗೆ ನೀಡಿದ್ದೀರಾ ಅಥವಾ ಇಲ್ಲವೇ ?

ಉತ್ತರಃ

ಪ್ರಶ್ನೆ-5 ಸದರಿ ಚೆಕ್ಕನ್ನು ಸಾಲದ ಬಾಧ್ಯತೆಗಾಗಿ ದೂರುದಾರರಿಗೆ ನೀಡಲಾಗಿದೆ ಎಂಬುದನ್ನು ಒಪ್ಪಿಕೊಳ್ಳುವೀರಾ ಅಥವಾ ಇಲ್ಲವೇ ?

ಉತ್ತರಃ

## ಆರೋಪಿಯ ಪ್ರತಿರಕ್ಷಣೆಗಾಗಿ ಕೇಳಲಾದ ಪ್ರಶ್ನೆಗಳು

ಪ್ರಶ್ನೆ-ಎ ಚೆಕ್ಕನ್ನು ಭದ್ರತೆಗಾಗಿ ನೀಡಲಾಗಿದೆಯೇ ?

ಉತ್ತರಃ

ಪ್ರಶ್ನೆ-ಬಿ ಸಾಲವನ್ನು ಈಗಾಗಲೇ ಮರುಪಾವತಿ ಮಾಡಲಾಗಿದೆಯೇ ?

ಉತ್ತರಃ

ಪ್ರಶ್ನೆ-ಸಿ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಯೇ ?

ಉತ್ತರಃ

ಪ್ರಶ್ನೆ-6 ಪ್ರಕರಣವನ್ನು ಈ ಹಂತದಲ್ಲಿ ರಾಜಿ ಮಾಡಿಕೊಳ್ಳಲು ಒಪ್ಪಿಗೆ ಇದೆಯೇ ಅಥವಾ ಇಲ್ಲವೇ ?

ಉತ್ತರಃ

ಪ್ರಶ್ನೆ-7 ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ಆಗಬೇಕೇ?

ಉತ್ತರಃ

(ದಿನಾಂಕ 28.01.2026 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ಧೃಡೀಕರಿಸಿದೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಕೆ ಆರ್ ನಗರ.**